ಕರ್ನಾಟಕ ಸರ್ಕಾರ

ಸಂ:ಉತನಿ/ತರಬೇತಿ/ಆಡಳಿತ-5/ಏವ-21/2015-16.

ಉದ್ಯೋಗ ಮತ್ತು ತರಬೇತಿ ನಿರ್ದೇಶನಾಲಯ,
ಕೌಶಲ್ಯ ಭವನ, ಡೈರಿ ವೃತ್ತ,
ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.
ದಿನಾಂಕ: 12-08-2015.

## ಸುತ್ತೋಲೆ

ವಿಷಯ:- ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಉಗ್ರಾಣವನ್ನು ವಾರ್ಷಿಕ ಭೌತಿಕ ತಪಾಸಣೆ ಮಾಡುವ ಬಗ್ಗೆ.

ಉಲ್ಲೇಖ:- ಕನಾಟಕ ಆರ್ಥಿಕ ಸಂಹಿತೆ ಅನುಚ್ಛೇದ-169, 170, 171 ಮತ್ತು 172.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ಉಗ್ರಾಣವನ್ನು 2014-15 ನೇ ಸಾಲಿಗೆ ವಾರ್ಷಿಕ ಭೌತಿಕ ತಪಾಸಣೆ ಕೈಗೊಳ್ಳುವುದು ಉಲ್ಲೇಖದ ನಿಯಮದಂತೆ ಕಡ್ಡಾಯವಾಗಿರುತ್ತದೆ. ಆದ್ದರಿಂದ ನಿಮ್ಮ ಸಂಸ್ಥೆಯಲ್ಲಿನ ಉಗ್ರಾಣವನ್ನು ತಪಾಸಣೆ ಕೈಗೊಂಡು ಉಗ್ರಾಣಪಾಲಕರ ನಿರ್ವಹಣೆ, ದಾಸ್ತಾನು ಲೆಖರಣೆ, ವಿತರಣೆ ಹಾಗೂ ಸಾಮಗ್ರಿಗಳ ಭೌತಿಕ ಉಪಸ್ಥಿತಿ ಮತ್ತು ಅವುಗಳ ಗುಣಮಟ್ಟದ ಬಗ್ಗೆ ಸಮಗ್ರ ವರದಿಯನ್ನು ನಿಗದಿತ ನಮೂನೆಯಲ್ಲಿ ನೀಡಲು ತಿಳಿಸಿದೆ. ಯಾವುದೇ ಕಾರಣದಿಂದ ಉಗ್ರಾಣದಲ್ಲಿನ ಸಾಮಗ್ರಿಗಳ ಕೊರತೆ ಅಥವಾ ಕಳವು ಇಂತಹ ಪ್ರಕರಣಗಳಿಗೆ ಸಂಬಂಧಿಸಿದವರಿಂದ ಮಾಡಿರುವ ವಸೂಲಾತಿಯ ಬಗ್ಗೆ ನಿಮ್ಮ ಸಂಸ್ಥೆಯ ಕಳೆದ 5 ವರ್ಷಗಳ ವರದಿಯ ಪ್ರತಿಗಳನ್ನು 15 ದಿನಗಳೊಳಗಾಗಿ ಸಲ್ಲಿಸಲು ತಿಳಿಸಿದೆ. ತಪ್ಪಿದಲ್ಲಿ ಸಂಸ್ಥೆಯ ಪ್ರಾಚಾರ್ಯರ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲಾಗುವುದು.

12/8

ಜಂಟಿ ನಿರ್ದೇಶಕರು ತರಬೇತಿ(ಆಡಳಿತ),
ಉದ್ಯೋಗ ಮತ್ತು ತರಬೇತಿ.

ಗೆ,

1) ಜಂಟಿ ನಿರ್ದೇಶಕರು(ತ), ವಿಭಾಗೀಯ ಕಛೇರಿ, ಬೆಂಗಳೂರು/ಮೈಸೂರು/ಹುಬ್ಬಳ್ಳಿ/ಕಲಬುರಗಿ/ಸ್ಟಾರ್ಕ್ ಮಳವಳ್ಳಿ/ಏಟಿಓಟಿ ದಾವಣಗೆರೆ ರವರುಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
2) ಎಲ್ಲಾ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರಾಚಾರ್ಯರುಗಳ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.